ಈ ವಿಚಾರದಲ್ಲಿ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು, ಇಂಜಿನಿಯರ್ಸ್‌ಗಳಲ್ಲಿರುವ ಭಿನ್ನಾಭಿಪ್ರಾಯವನ್ನು ಬಗೆಹರಿಸಿ ಸ್ಥಗಿತಗೊಂಡಿರುವ ಕೆಲಸವನ್ನು ಜರೂರಾಗಿ ಮುಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ: ಕ್ರಮವನ್ನು ತೆಗೆದುಕೊಳ್ಳುತ್ತೇನೆ.

Permission to start English Medium Schools

2502 - Sri S. Shafi Ahmed, (Tumkur): Will the Minister for Education and parliamentry Affairs be pleased to state

a) The action taken by the Government to grant permission to start the English Medium Schools, If so , when the permission will be accorded:

b) The number of English Medium Schools in the State; district wise list to be furnished;

c) The number of applications are pending for approval of starting the english medium schools?

Sri. M .Veerappa Moily (Minister for Education and parliamentry Affairs)

a) Government had appointed an expert committee to submit report regarding opening of English Medim Primary School in the State. The report has been submitted to Government and it is under consideration. Soon decision will be taken.

b) There are 1058 recognised English Medium Primary Schools in the State. District wise list appended.

c) 483 applications have been received for sanction of English Medium School.

English Medium Primary School

SL. NO.	*NAME OF THE DISTRICT*	*RECOGNISED SCHOOLS*
1.	Bangalore North	230
2.	Bangalore South	299
3.	Bangalore Rural	18
4.	Kolar	20
5.	Tumkur	51
6.	Shimoga	31
7.	Chitradurga	29
8.	Mysore	61
9.	Mandya	20
10.	Hassan	34
11.	Chikmagalur	18

12. D.K. District	55
13. Kodagu	21
14. Belgaum	20
15. Uttar Kannada	19
16. Dharwar	41
17. Bijapur	23
18. Gulbarga	08
19. Bellary	29
20. Raichur	17
21. Bidar	14
Total	**1058**

ಶ್ರೀ ಎಸ್. ಶಫಿ ಅಹಮದ್ : ಇಂಗ್ಲೀಷ್ ಸ್ಕೂಲ್‌ಗಳನ್ನು ಸರ್ಕಾರಿ ಅತಿ ಶೀಘ್ರದಲ್ಲಿ ಮಾಡುತ್ತೇವೆಂದು ರಿಪ್ಲೈ ಕೊಟ್ಟಿದ್ದಾರೆ. ಆರು ತಿಂಗಳಿನಿಂದ ಇದೇ ರೀತಿ ಉತ್ತರ ಬರುತ್ತಲೇ ಇದೆ. ಮತ್ತು ಇವೊತ್ತು ಸರ್ಕಾರದ ಮುಂದೆ 483 ಅರ್ಜಿಗಳು ಪೆಂಡಿಂಗ್ ಇದೆಯೆಂದು ಹೇಳಿದ್ದಾರೆ. ತಾವು ಎಷ್ಟು ದಿವಸಗಳಲ್ಲಿ ಮಂಜೂರು ಮಾಡಿಕೊಡುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಈ ಸದನದಲ್ಲಿ ಉತ್ತರ ಕೊಟ್ಟ ನಂತರ ಬಹಳ ಪ್ರಗತಿಯಾಗಿದೆ. ತಜ್ಞರ ಸಮಿತಿ ಈಗಾಗಲೇ ಶಿಫಾರಸ್ಸು ಮಾಡಿದೆ. ಆ ಶಿಫಾರಸ್ಸುಗಳನ್ನು ಶಿಕ್ಷಣ ಇಲಾಖೆಯವರು ಪರಿಶೀಲನೆ ಮಾಡಿ, ವಿಶ್ಲೇಷಣೆ ಮಾಡಿ ಕ್ಯಾಬಿನೆಟ್‌ಗೆ ಕಳುಹಿಸಿದ್ದಾರೆ. ಅದಿನ್ನೂ ಕ್ಯಾಬಿನೆಟ್‌ನಲ್ಲೇ ಇದೆ. any day ನಿರ್ಣಯವಾಗುತ್ತದೆ.

ಶ್ರೀ ಎಸ್. ಶಫಿ ಅಹಮದ್ : ಕಳೆದ ಆರು ತಿಂಗಳಿಂದಲೂ ಇದೇ ಉತ್ತರ ಬರುತ್ತಿದೆ.

ಅಧ್ಯಕ್ಷರು : ಸ್ವಲ್ಪ ಪ್ರಗತಿಯಾಗಿದೆಯೆಂದು ಹೇಳುತ್ತಿದ್ದಾರಲ್ಲಾ. ಆರು ತಿಂಗಳಿಗೊಮ್ಮೆ ಪ್ರಗತಿಯಾಗುತ್ತದೆ.

ರೈತರ ಪಂಪುಸೆಟ್‌ಗಳಿಗೆ ವಿದ್ಯುತ್ ಸರಬರಾಜು

2427 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989 ರಿಂದ 1991 ರವರೆಗೆ ರಾಜ್ಯದಲ್ಲಿ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಒದಗಿಸಲಾದ ಸಂಖ್ಯೆ ಎಷ್ಟು? (ಜಿಲ್ಲಾ ಹಾಗೂ ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಉಪ-ವಿಭಾಗಗಳಲ್ಲಿ ವಿದ್ಯುತ್ ಪೂರೈಕೆ ಮಾಡಲು ಸಾಮಗ್ರಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) 1989ರಿಂದ 1991ರವರೆಗೆ ಉಪ-ವಿಭಾಗಗಳಿಗೆ ಪೂರೈಸಿದ ಸಾಮಗ್ರಿಗಳೆಷ್ಟು? (ಜಿಲ್ಲಾ ಮತ್ತು ಉಪ-ವಿಭಾಗವಾರು ಮಾಹಿತಿಯನ್ನೊದಗಿಸುವುದು)

ಈ) ರಾಜ್ಯದಲ್ಲಿ ಇನ್ನು ವಿದ್ಯುತ್ ಪೂರೈಕೆಯಾಗದೆ ಇರುವ ಗ್ರಾಮಗಳೆಷ್ಟು ಮತ್ತು ರೈತರ ಪಂಪುಸೆಟ್ಟುಗಳೆಷ್ಟು? (ಜಿಲ್ಲಾ ಹಾಗೂ ತಾಲ್ಲೂಕುವಾರು ಮಾಹಿತಿಗಳನ್ನೊದಗಿಸುವುದು)